# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 41 ಫ್ರಾ.ಸಾ. : 18**

| | | |
|---|---|---|
| ಸಾಕ್ಷಿಯ ಹೆಸರು | : | ಅನಿಲ ಎಸ್ ಕೊಳಂಕರ |
| ತಂದೆಯ ಹೆಸರು | : | ಶಂಭಾ ಕೊಳಂಕರ |
| ವಯಸ್ಸು | : | 72 ವರ್ಷ |
| ಕೆಲಸ | : | ನಿವೃತ್ತ ಇಂಜನಿಯರ್ |
| ವಾಸ | : | ಕಾರವಾರ |

**ದಿನಾಂಕಃ 17-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. 2002 ರಿಂದ ಮೇ-2014 ರ ವರೆಗೆ ನಾನು ಕಾರವಾರದ ಪಂಚಾಯತರಾಜ್ ಉಪ ವಿಭಾಗದಲ್ಲಿ ಸಹಾಯಕ ಅಭಿಯಂತರನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನನಗೆ ಕಟ್ಟಡಗಳ ಹಾಗೂ ಜಮೀನುಗಳ ನಕಾಶೆಯನ್ನು ತಯಾರಿಸುವ ಅನುಭವ ಇರುತ್ತದೆ ಹಾಗೂ ನಾನು ಈಗಾಗಲೇ ಹಲವಾರು ಅಪರಾಧಿಕ ಪ್ರಕರಣದಲ್ಲಿ ನಕಾಶೆಯನ್ನು ತಯಾರಿಸಿ, ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಹಾಗೂ ಸಾಕ್ಷಿ ನುಡಿದಿರುತ್ತೇನೆ. ದಿಃ 04-03-2014 ರಂದು ಕದ್ರಾ ವೃತ್ತ ನಿರೀಕ್ಷಕರು ಈ ಪ್ರಕರಣದ ಘಟನಾ ಸ್ಥಳದ ನಕಾಶೆಯನ್ನು ತಯಾರಿಸಿಕೊಡುವಂತೆ ನಮ್ಮ ಕಚೇರಿಗೆ ಕೋರಿಕೆಯನ್ನು ಸಲ್ಲಿಸಿದ್ದು, ಅದರಂತೆ ನಮ್ಮ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರು ನನಗೆ ನಕಾಶೆ ತಯಾರಿಸಿ, ನೀಡುವಂತೆ ಮೌಖಿಕವಾಗಿ ಸೂಚಿಸಿದ ಮೇರೆಗೆ, ದಿಃ 11-03-2014 ರಂದು ನಾನು ರಾಜೀವ ನಗರಕ್ಕೆ ಭೇಟಿ ನೀಡಿ, ಚಾಸಾ-55 ರವರು ತೋರಿಸಿದ ಘಟನಾ ಸ್ಥಳಗಳಾದ ವೇಲು ರವರ ಮನೆಯಲ್ಲಿ ಅಶ್ವಿನಿ ಶವ ಬಿದ್ದ ಸ್ಥಳ ಹಾಗೂ ಕಾಡಿನ ಕಡೆಗೆ ಹೋಗುವ ಕಾಲು ದಾರಿಯಲ್ಲಿ ವೇಲು ಹಾಗೂ ಸತ್ಯ ನಾರಾಯಣ ಮೂರ್ತಿಯ ಶವ ಬಿದ್ದ ಸ್ಥಳಗಳನ್ನು ಪರಿಶೀಲಿಸಿ, ನಕಾಶೆಯನ್ನು ತಯಾರಿಸಿ, ಸದರಿ ನಕಾಶೆಯನ್ನು ನಾನು ನಮ್ಮ ಕಾರ್ಯನಿರ್ವಾಹಕ ಅಭಿಯಂತರವರಿಗೆ ನೀಡಿದ್ದು, ಅವರು ಅದನ್ನು ಕವಚ ಪತ್ರದೊಂದಿಗೆ ಕದ್ರಾ ವೃತ್ತ ನಿರೀಕ್ಷಕರಿಗೆ ನೀಡಿರುತ್ತಾರೆ. ಸಾಕ್ಷಿ ತಮ್ಮ ಕಚೇರಿಗೆ ಬಂದ ಕೋರಿಕೆ

ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–47 ಎಂದು, ನಕಾಶೆಯನ್ನು ನಿಪಿ–48 ಎಂದು, ಸಾಕ್ಷಿಯ ಸಹಿಯನ್ನು ನಿಪಿ–48(ಎ) ಎಂದು, ಕವಚ ಪತ್ರವನ್ನು ನಿಪಿ–49 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ.ವಕೀಲರಿಂದ**

2. ಕೋರಿಕೆ ಪತ್ರದೊಂದಿಗೆ ಪೊಲೀಸರು ಪಂಚನಾಮೆಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿಯೇ ಪಕ್ಕಾ ನಕಾಶೆಯನ್ನು ತಯಾರಿಸಿರುತ್ತೇನೆ. ನಾನು ಮೇಲೆ ಹೇಳಿದಂತೆ ಯಾವುದೇ ಘಟನಾ ಸ್ಥಳಗಳಿಗೆ ಭೇಟಿ ನೀಡಿಲ್ಲ, ಸ್ಥಳದಲ್ಲಿಯೇ ನಕಾಶೆಯನ್ನು ತಯಾರಿಸಿಲ್ಲ ಹಾಗೂ ನಿಪಿ–48 ನ್ನು ಕಚೇರಿಯಲ್ಲಿಯೇ ತಯಾರಿಸಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ